# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ,

# ನಂಜನಗೂಡು

**ಸಿ.ಸಿ. ನಂ.313-2021** **ಡಿ .ಡಬ್ಲ್ಯುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ತಂದೆ/ ಗಂಡನ ಹೆಸರು<br>ವಯಸ್ಸು<br>ಉದ್ಯೋಗ<br>ವಾಸ್ತವ್ಯ | ಎನ್.ರವಿಕುಮಾರ್<br>ನರಸೇಗೌಡ<br>53 ವರ್ಷ<br>ಪತ್ರಬರಹಗಾರರ ಸಹಾಯಕರು,<br>ನಂಜನಗೂಡು |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 12-09-2023. |

## ಮುಖ್ಯ ವಿಚಾರಣೆಃ ಶ್ರೀ ಈ.ಎಂ.ಕೆ ವಕೀಲರಿಂದಃ

ನನಗೆ ಪಿರ್ಯಾದಿದಾರರ ಪರಿಚಯ ಇರುತ್ತದೆ. ಪಿರ್ಯಾದಿದಾರರು ರಿಯಲ್ ಎಸ್ಟೇಟ್ ವ್ಯವಹಾರವನ್ನು ನಂಜನಗೂಡಿನಲ್ಲಿ ಮಾಡುತ್ತಾರೆ. ನಿವೇಶನ, ಜಮೀನು ಮತ್ತು ಮನೆಗಳನ್ನು ಕೊಳ್ಳುವುದು ಮತ್ತ ಅವುಗಳನ್ನು ಮಾರಾಟ ಮಾಡುವುದನ್ನು ಪಿರ್ಯಾದಿದಾರರು ಮಾಡುತ್ತಾರೆ. ನಾನು ಪತ್ರಬರಹಗಾರರ ಬಳಿ ಕೆಲಸ ಮಾಡುತ್ತಿದ್ದಾಗ, ಪಿರ್ಯಾದಿದಾರರ ಬ್ಯಾಂಕ್ ವ್ಯವಹಾರವನ್ನು ಅಂದರೆ ಹಣ ಕಟ್ಟುವುದು, ತರುವುದು ಹಾಗೂ ಡಿ.ಡಿ. ತರುವ ವ್ಯವಹಾರವನ್ನು ಮಾಡುತ್ತಿದ್ದೆನು. ಕೆಲವೊಮ್ಮೆ ಪಿರ್ಯಾದಿದಾರರು ಚೆಕ್ ನೀಡಿ ಹಣ ತರುವಂತೆ ತಿಳಿಸುತ್ತಿದ್ದು, ಕೆಲವೊಮ್ಮೆ ನನ್ನ ಖಾತೆಗೆ ಹಣ ವರ್ಗಾವಣೆ ಮಾಡಿ ಹಣ ತರಲು ಹೇಳುತ್ತಿದ್ದರು. ನಾನು ಪಿರ್ಯಾದಿದಾರರ ಬಳಿ ಮಾಡುತ್ತಿದ್ದು ಬ್ಯಾಂಕ್ ವ್ಯವಹಾರದ ಭದ್ರತೆಗಾಗಿ ಪಿರ್ಯಾದಿದಾರರು ನನ್ನಿಂದ 7 ಚೆಕ್ಕುಗಳನ್ನು, ಆನ್ ಡಿಮ್ಯಾಂಡ್ ಪ್ರನೋಟ್ ಅನ್ನು ಪಡೆದುಕೊಂಡಿದ್ದರು. ನನ್ನಿಂದ ಪಿರ್ಯಾದಿದಾರರು ಸಹಿ ಮಾಡಿದ ಖಾಲಿ ಚೆಕ್ಕುಗಳು ಮತ್ತು ಸಹಿ ಮಾಡಿದ ಖಾಲಿ ಆನ್ ಡಿಮ್ಯಾಂಡ್ ಪ್ರನೋಟ್ ಅನ್ನು ಪಡೆದುಕೊಂಡಿದ್ದರು. ಪಿರ್ಯಾದಿದಾರರು ಕೆಲವೊಂದು ದಾಖಲೆಗಳಿಗೆ ಸಾಕ್ಷಿದಾರರಾಗಿ ನನ್ನ ಸಹಿ ಸಹ ಪಡೆದುಕೊಳ್ಳುತ್ತಿದ್ದರು. ನಾನು ಪಿರ್ಯಾದಿದಾರರಿಗೆ ಕೆಲಸ ಮಾಡಿಕೊಟ್ಟ ಸಮಯ ಆ ಕೆಲಸಕ್ಕಪ ಪ್ರತಿಫಲವಾಗಿ ರೂ.500/- ಹಾಗೂ ರೂ.1,000/- ಗಳನ್ನು ನೀಡುತ್ತಿದ್ದರು. ನಾನು ಕೆಲಸವಿಲ್ಲದ ಸಮಯ ಪಿರ್ಯಾದಿದಾರರ ಕಾರಿನ ಚಾಲಕನಾಗಿಯೂ ಸಹ ಕೆಲಸ

ಮಾಡುತ್ತಿದ್ದೆನು. ನಿವೇಶನವನ್ನು ನೀಡಿಸಿದ ಕಮೀಷನ್ ವಿಚಾರವಾಗಿ ನನಗೂ ಮತ್ತು ಪಿರ್ಯಾದಿದಾರರಿಗೂ ವೈಮಸ್ಸನು ಉಂಟಾಗಿರುತ್ತದೆ. ತದನಂತರ ನಾನು ಪಿರ್ಯಾದಿದಾರರ ಬಳಿ ಕೆಲಸ ಮಾಡುವುದನ್ನು ನಿಲ್ಲಿಸಿರುತ್ತೇನೆ. ಆನಂತರದಲ್ಲಿ ನಾನು ಪಿರ್ಯಾದಿದಾರರ ಬಳಿ ಕೆಲಸ ಮಾಡುವುದನ್ನು ನಿಲ್ಲಿಸಿದ ನಂತರ ನಾನು ಪಿರ್ಯಾದಿದಾರರಿಗೆ ಅವರ ಬಳಿ ಕೆಲಸ ಮಾಡುತ್ತಿದ್ದ ಸಮಯ ಭದ್ರತೆಗಾಗಿ ನೀಡಿದ್ದ ಚೆಕ್‌ಗಳು ಮತ್ತು ಆನ್ ಡಿಮ್ಯಾಂಡ್ ಪ್ರನೋಟ್ ಅನ್ನು ವಾಪಸ್ಸು ಮಾಡುವಂತೆ ಕೇಳಿಕೊಂಡಾಗ ಅವರು ವಾಪಸ್ಸು ಮಾಡುವುದಾಗಿ ತಿಳಿಸಿ ನಂತರ ಅವರ ಚೆಕ್‌ಗಳು ಮತ್ತು ಆನ್ ಡಿಮ್ಯಾಂಡ್ ಪ್ರನೋಟ್ ಅನ್ನು ನನಗೆ ಹಿಂದಿರುಗಿಸಿರುವುದಿಲ್ಲ.

2. ತದನಂತರ ಪಿರ್ಯಾದಿದಾರರು ಪ್ರನೋಟ್ ಆಧಾರದ ಮೇರೆಗೆ ನನ್ನ ವಿರುದ್ಧ ನಂಜನಗೂಡು ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಿರುತ್ತಾರೆ. ನಾನು ಪಿರ್ಯಾದಿದಾರರಿಗೆ ನನಗೆ ಸೇರಿದ ಕರ್ನಾಟಕ ಬ್ಯಾಂಕ್, ಹೆಚ್.ಡಿ.ಎಫ್.ಸಿ ಬ್ಯಾಂಕ್ ಮತ್ತು ಎಸ್.ಬಿ.ಐ ನ ಚೆಕ್ಕುಗಳನ್ನು ಭದ್ರತೆಗಾಗಿ ನೀಡಿರುತ್ತೇನೆ. ಅವುಗಳ ಪೈಕಿ ನಿಪಿ-1 ರ ಚೆಕ್ಕು ಸಹ ಒಂದಾಗಿರುತ್ತದೆ. ನಾನು ನೀಡಿದ್ದ ಉಳಿದ ಚೆಕ್ಕುಗಳ ಪೈಕಿ ಒಂದು ಚೆಕ್ಕನ್ನು ದೊಡ್ಡರಾಜು ಬಿನ್ ನಿಂಗನಾಯ್ಕ ರವರ ಮುಖೇನ ಬ್ಯಾಂಕಿಗೆ ಹಾಜರುಪಡಿಸಿ ನನಗೆ ನೋಟಿಸ್ ನೀಡಿಸಿದ್ದು, ಅದಕ್ಕೆ ನಾನು ಪ್ರತ್ಯುತ್ತರವನ್ನು ನೀಡಿಸಿದ್ದು, ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

3. ಅದೇ ರೀತಿ ಪಿರ್ಯಾದಿದಾರರು ತನ್ನ ಭಾವನವರ ಮುಖೇನ ಮತ್ತೊಂದು ಚೆಕ್ಕನ್ನು ಬ್ಯಾಂಕಿಗೆ ಹಾಜರುಪಡಿಸಿ ನನಗೆ ನೋಟಿಸ್ ನೀಡಿಸಿದ್ದು ಅದಕ್ಕೆ ನಾನು ಪ್ರತ್ಯುತ್ತರವನ್ನು ನೀಡಿಸಿದ್ದು, ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ದೊಡ್ಡರಾಜು ಮತ್ತು ಪಿರ್ಯಾದಿದಾರರ ಭಾವನವರು ನೀಡಿದ ನೋಟಿಸ್‌ಗೆ ಪ್ರತ್ಯುತ್ತರವನ್ನು ನೀಡಿದ ನಂತರ ಸದರಿಯವರುಗಳು ನನ್ನ ವಿರುದ್ಧ ಯಾವುದೇ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ

(ಮುಂದುವರಿದ ಮುಖ್ಯ ವಿಚಾರಣೆಗೆ ವಕೀಲರು ಸಮಯಾವಕಾಶವನ್ನು ಕೇಳಿರುವುದರಿಂದ ಸಮಯಾವಕಾಶವನ್ನು ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**